ಸಂಪುಟ Volume 60 | ಸಂಚಿಕೆ Issue 233 | ಪುಟ Pages 12+4
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere

# ಸಂಯುಕ್ತ ಕರ್ನಾಟಕ

samyukthakarnataka
ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು


ಹಾಲ್ ಆಫ್ ಫ್ರೇಮ್ ಗಾಯಕ ಬಡ್ಡಿ ಗೈ ಅವರು ಹ್ಯಾಟ್‌ಫೀಲ್ಡ್ ಹಾಲ್‌ನ ವೇದಿಕೆಯ ಮೇಲೆ ನಿಂತು ಸಭಿಕರನ್ನು ಸ್ವಾಗತಿಸಿದ ಪರಿ.

ಸೋಮವಾರ Monday | ಸೆಪ್ಟೆಂಬರ್ 17-2018 September | ₹ 5-00

ಶ್ರೀಲಂಕಾ ವಿರುದ್ಧ ಕಟುನಾಯಕೆ ನಗರದ ಕ್ರೀಡಾಂಗಣದಲ್ಲಿ ಮಹಿಳಾ ಅಂತಾರಾಷ್ಟ್ರೀಯ ಏಕದಿನ ಪಂದ್ಯದಲ್ಲಿ ಭಾರತದ ಕ್ರಿಕೆಟ್ ಆಟಗಾರ್ತಿ ಮಿತಾಲಿ ರಾಜ್ ಅರ್ಧಶತಕ ಬಾರಿಸಿ ಸಂಭ್ರಮಿಸಿದ ಕ್ಷಣ.

CENTRAL LIBRARY

## ಡಾಕ್ಟರೇಟ್ ಪದವಿ



**ಮಂಗಳೂರು:** ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆಂಡ್ ಮ್ಯಾನೇಜ್‌ಮೆಂಟ್‌ನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಅನುಶ್ ಬೇಕಲ್ ಅವರು ಅಹಮದಾಬಾದ್ ಪ್ರತಿಷ್ಠಿತ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿನಲ್ಲಿ ನಡೆದ 13 ನೇ ಸಮಾವೇಶದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ಅವರ ಪಿಎಚ್‌ಡಿ ಪ್ರಬಂಧದ ಶೀರ್ಷಿಕೆಯು ಖಖಖಖಿ-ಂ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ (ಮೈಕ್ರೋಎಲೆಕ್ಟ್ರಾನಿಕ್ಸ್ ವಿಭಾಗ) ಅಸೋಸಿಯೇಟ್ ಪ್ರಾಧ್ಯಾಪಕ ಇಲಾಖೆಯ ಡಾ. ಮನೀಶ್ ಗೋಸ್ವಾಮಿ, ಅವರ ಮಾರ್ಗದರ್ಶನದಲ್ಲಿ 'ಇಮ್ಪ್ರೋವೆಡ್ ಡಿಸೈನ್ ಆಫ್ ಜಿನ್ಪ್ರೊನೊಕ್ಸ್ ಆಂಡ್ ವಿಥ್ ರೆಡ್ಯೂಸ್ಡ್ ಕಂಪೆರೇಟೋರ್ ಕೌಂಟ್ಸ್' ಪ್ರಬಂಧ ಮಂಡಿಸಿದರು.




# ಉದಯವಾಣಿ

ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಸೋಮವಾರ, ಸೆಪ್ಟಂಬರ್ 17, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 12

TOLL FREE

## ಎಂಬಿಎ, ಎಂಸಿಎ ಸೀಟು ಹಂಚಿಕೆ ಗೊಂದಲ: ಅಭ್ಯರ್ಥಿಗಳಲ್ಲಿ ಹೆಚ್ಚಿದ ಆತಂಕ

ಶಿಕ್ಷಣ

ಬೆಂಗಳೂರು, ಸೆ. 16: ಎಂಬಿಎ, ಎಂಸಿಎ ಹಾಗೂ ಎಂ.ಟೆಕ್ ಮೊದಲಾದ ಸ್ನಾತಕೋತ್ತರ ಕೋರ್ಸ್‌ಗಳ ಸರಕಾರಿ ಕೋಟಾದ ಸೀಟುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಪ್ರವೇಶ ಪರೀಕ್ಷೆ, ದಾಖಲಾತಿ ಪರಿಶೀಲನೆ ಹಾಗೂ ಸೀಟು ಹಂಚಿಕೆ ಫಲಿತಾಂಶ ಸಹಿತ ಇಡೀ ಪ್ರಕ್ರಿಯೆ ಈ ವರ್ಷ ಗೊಂದಲದ ಗೂಡಾಗಿದೆ.

ಪ್ರವೇಶ ಪರೀಕ್ಷೆಗೆ ಮೇ 25ರಂದು ಅರ್ಜಿ ಸ್ವೀಕಾರ ಮಾಡಿದ ದಿನದಿಂದ ಆ.18ರಂದು ಪ್ರಕಟಿಸಿದ್ದ ರ್‍ಯಾಂಕಿಂಗ್ ಲಿಸ್ಟ್‌ವರೆಗೂ ಅಭ್ಯರ್ಥಿಗಳಿಗೆ ಸೂಕ್ತ ಮಾಹಿತಿ ನೀಡಿದೇ, ನಿಗದಿತ ಸಮಯಕ್ಕೆ ಪ್ರಕ್ರಿಯೆ ಪೂರ್ಣಗೊಳಿಸದೇ ಇರುವುದರಿಂದ ಸರಕಾರಿ ಕೋಟಾದಡಿ ಸೀಟು ಬಯಸಿ, ರ್‍ಯಾಂಕ್ ಪಡೆದಿರುವ ಅಭ್ಯರ್ಥಿಗಳು ಈಗ ಆತಂಕದಲ್ಲಿದ್ದಾರೆ.

ಜುಲೈ 19ರಂದು ಪ್ರವೇಶ ಪರೀಕ್ಷೆಯ ಕೀ ಉತ್ತರ ಪ್ರಕಟಿಸಿದ್ದ ಪ್ರಾಧಿಕಾರ, ಅದರಲ್ಲಿ ತಪ್ಪುಗಳಾಗಿವೆ ಎಂದು ಸಬೂಬು ನೀಡಿ ವಾಪಸ್ ಪಡೆದು, ಮತ್ತೆ ಹೊಸ ಕೀ ಉತ್ತರ ಪ್ರಕಟಿಸಿತ್ತು. ಈ ನಡುವೆ ಆ.18ರಂದು ರ್‍ಯಾಂಕಿಂಗ್ ಲಿಸ್ಟ್ ಬಿಡುಗಡೆ ಮಾಡಿತ್ತು. ಆದರೆ ಇದೀಗ ಮೆರಿಟ್ ಲಿಸ್ಟ್ ಹೊಸದಾಗಿ ಪ್ರಕಟಿಸಲಿದ್ದೇವೆ ಎಂದು ಪ್ರಾಧಿಕಾರ ಸಂದೇಶ ರವಾನಿಸಿದೆ. ಹೀಗಾಗಿ ಎಂಬಿಎ ಮೊದಲಾದ ಸ್ನಾತಕೋತ್ತರ ಕೋರ್ಸ್‌ಗಳ ಸರಕಾರಿ ಸೀಟುಗಾಗಿ ಕಾದು ಕುಳಿತಿರುವ ಸಾವಿರಾರು ಅಭ್ಯರ್ಥಿಗಳು ಗೊಂದಲಕ್ಕೆ ಒಳಗಾಗಿದ್ದಾರೆ.

ಈ ವರ್ಷ ಸುಮಾರು 25 ಸಾವಿರ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ರ್‍ಯಾಂಕಿಂಗ್ ಲಿಸ್ಟ್ ಆಧಾರದಲ್ಲಿ ಸೀಟು ಆಯ್ಕೆ ಮಾಡಿಕೊಳ್ಳಬೇಕು ಎನ್ನುವಷ್ಟರಲ್ಲಿ ಹೊಸ ದಾಗಿ ಮೆರಿಟ್ ಲಿಸ್ಟ್ ಪ್ರಕಟ ಸಂದೇಶ ದೂರವಾಣಿ ಮೂಲಕ ರವಾನಿಸಿದ್ದರಿಂದ ಮುಂದೇನಾಗುವುದು ಎಂಬ ಆತಂಕದಲ್ಲಿ ಇದ್ದಾರೆ.

ಪ್ರಾಧಿಕಾರವು ಪ್ರಸಕ್ತ ಸಾಲಿನಲ್ಲಿ ಅರ್ಜಿ ಸ್ವೀಕಾರ, ಪ್ರವೇಶ ಪತ್ರ ಡೌನ್‌ಲೋಡ್, ದಾಖಲಾತಿ ಪರಿಶೀಲನೆ, ಕೀ ಉತ್ತರ ಪ್ರಕಟ ಸಹಿತ ಎಲ್ಲ ಹಂತದಲ್ಲೂ ವಿಳಂಬ ಹಾಗೂ ಗೊಂದಲವನ್ನೇ ಸೃಷ್ಟಿಸಿತ್ತು. ಖಾಸಗಿ ಕಾಲೇಜುಗಳಲ್ಲಿ ಈಗಾಗಲೇ ವಾಣಿಜ್ಯ ಶಾಸ್ತ್ರದ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಮುಗಿದು, ತರಗತಿಗಳು ಆರಂಭವಾಗಿ ತಿಂಗಳು ಕಳೆದಿವೆ. ಮೊದಲ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿಗಳು ಸಜ್ಜಾಗುತ್ತಿದ್ದಾರೆ. ಆದರೆ ಸರಕಾರಿ ಕೋಟಾದಡಿ ಸೀಟು ಬಯಸಿರುವವರಿಗೆ ಇನ್ನೂ ಪ್ರವೇಶ ಪ್ರಕ್ರಿಯೆಯೇ ಮುಗಿದಿಲ್ಲ, ಸದ್ಯದ ವೇಳಾಪಟ್ಟಿ ಪ್ರಕಾರ ಸೀಟು ಹಂಚಿಕೆ ಪ್ರಕ್ರಿಯೆ ಮುಗಿಯಲು ಇನ್ನೂ 15 ದಿನಗಳು ಬೇಕಾಗುತ್ತವೆ. ಹೀಗಾದರೇ ಅಭ್ಯರ್ಥಿಗಳು ಸೆಮಿಸ್ಟರ್ ಪರೀಕ್ಷೆ ಸಜ್ಜಾಗುವುದು ಹೇಗೆ ಎಂದು ಪೋಷಕರು ಪ್ರಶ್ನಿಸಿದ್ದಾರೆ.